Sri MANIKRAO PATIL (Deputy Minister for Home).—Sir, it is reported that at about 10-30 A.M. on 21st January 1970, about 500 students of B.V B. College, Bidar, took out a procession in the Town demanding reduction of rates of eatables in the hotels. When the procession reached Gung area, some miscreants pelted stones on Hotel "Upkar" causing damage to glass panes. The police promptly intervened and dispersed the students. A section of students reached Chatri junction and started pelting stones on Hotel "Alankar" and the employees of the hotel retaliated. They were dispersed by the Police. Later on, the students continued the procession to the Deputy Commissioner's Office, and after representing their grievances, they returned to Chatri junction and dispersed peacefully at about 1-30 P.M. The damage caused to both the hotels is estimated to be about Rs. 500. Two students sustained minor injuries.

A meeting of the representatives of the students and hotel owners was also held at the Deputy Commissioner's office the same afternoon.

Developments are under watch and the situation is reported to be peaceful.

Sri V. N. PATIL.—As per the information we have, it is clear that the General Secretary of the Students' Union had head injuries. We wanted to know his condition and of other students who were injured. There is no mention about it. What steps the Government have taken to see that the prices of eatables are reduced?

Sri MANIKRAO PATIL.—It is the inherent duty of the Government to maintain law and order. When students gathered in unlawful assembly and tried to damage public property, the Bidar Police have used minimum force to disperse the mob. Under that process, one student who sustained minor injuries has been admitted to the Hospital and he is now improving. So far as the reduction of prices of eatables is concerned, Government have no control over that matter.

Discussion on a matter *re*: disturbances in Bangalore City.

† ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸಭಾಪತಿಗಳೇ, ಮೊನ್ನೆ ದಿವಸ ಗೃಹ ಮಂತ್ರಿಗಳು ಈ ಸಭೆಯಲ್ಲಿ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಬೆಂಗಳೂರು ಪಟ್ಟಣವಲ್ಲಿ ಇರುವ ಎಲ್ಲಾ ಭಾಷೆ ಮಾತನಾಡುವ ಜನಗಳು, ಮೈನಾರಿಟಿ ಆಗಲಿ ಮೆಜಾರಿಟಿ ಆಗಲೀ, ಎಲ್ಲರೂ ಮೈನಾರಿಟಿಗಳು, ಅವರಿಗೆ ಪ್ರೊಟೆಕ್ಷನ್ ಕೊಡುವುದು ಸರಕಾರದ ಧರ್ಮ, ಆ ರೀತಿ ಪ್ರೊಟೆಕ್ಷನ್ ಕೊಡಬೇಕೆಂದು ಇಲಾಖಾ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ ಎಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ನಿನ್ನೆ ದಿವಸ ಮತ್ತೆ ಕನ್ನಡ ಚಳುವಳಿಗಾರರ ಹೆಸರಿನಲ್ಲಿ ಎಲ್ಲರ ಮನಸ್ಸಿಗೂ ವ್ಯಥೆಯನ್ನುಂಟುಮಾಡತಕ್ಕ ದುರ್ಘಟನೆ ನಡೆದಿದೆ. ಸುಬ್ರಮಣ್ಯ ನಗರದ ಹತ್ತಿರ ಪಿಲ್ ಕಾರ್ಖಾನೆ ಇದೆ. ಆ ಕಾರ್ಖಾನೆಯಲ್ಲಿ ಒಬ್ಬ ಬಡವನ ಮನೆಗೆ ನಿನ್ನೆ ಮಧ್ಯಾಹ್ನ ಒಂದೂವರೆ ಗಂಟೆಯ ಸಮಯದಲ್ಲಿ ಬೆಂಕಿ ಹಚ್ಚಿದ್ದರಿಂದ ಕಟ್ಟಿಹಾಕಿದಂಥ ಒಂದು ಎಮ್ಮೆಗೆ ಬೆಂಕಿ ಬಿದ್ದು ಅದು ಸ್ಥಳದಲ್ಲಿಯೇ ಮೃತವಾಗಿದೆ ಅಥವಾ ಸಾಯುವುದರಲ್ಲಿ ಇದೆ. ಇವೇ ರೀತಿ ಇನ್ನೊಂದು ಹಸುವಿಗೂ ಕೂಡ ಬೆಂಕಿ ತಗುಲಿದ್ದರೂ ಅದು ಬದುಕಿಕೊಂಡಿದೆ. ಕೂಲಿಗಾತರು ಸಾವಿರಾರು ರೂಪಾಯಿ ಸಾಲ ಮಾಡಿ ಎಮ್ಮೆ ತಂದಿದ್ದರೆ

ಹಗಲು ಹೊತ್ತಿನಲ್ಲಿ ಬೆಂಕಿ ಹಚ್ಚಿದ್ದರಿಂದ ಅದು ಸುಟ್ಟು ಹೋಗಿದೆ. ಅವರ ಗೋಳನ್ನು ನೋಡುವುದಕ್ಕಾಗುವುದಿಲ್ಲ. ತಮಿಳು ಜನರ ಮನಸ್ಸಿನಲ್ಲಿ ಭೀತಿ ಬಂದಿದೆ. ಅವರು ರಾತ್ರಿ ಹೊತ್ತು ಎಚ್ಚೆತ್ತುಕೂತುಕೊಳ್ಳುವ ಸ್ಥಿತಿಗೆ ಬಂದಿದ್ದಾರೆ. ಅವರಿಗೆ ರಕ್ಷಣೆ ಇಲ್ಲ ಎನ್ನುವ ಶಂಕೆ ಉಂಟಾಗಿದೆ. ಅದರಲ್ಲೂ ಬಡ ಜನರ ಮನಸ್ಸಿನಲ್ಲಿ ಉಂಟಾಗಿರತಕ್ಕ ಶಂಕೆ ನಿವಾರಣೆ ಆಗಿಲ್ಲ. ಮುಖ್ಯ ಮಂತ್ರಿಗಳು ಭರವಸೆ ಕೊಟ್ಟರೂ ಕೂಡ ಘಟನೆಗಳು ಏಕ ರೀತಿಯಲ್ಲಿ ನಡೆಯುವಾಗ ಪೋಲೀಸಿನವರು ಜನಗಳ ರಕ್ಷಣೆ ಸರಿಯಾದ ರೀತಿಯಲ್ಲಿ ಮಾಡುತ್ತಾರೆಯೇ ಎಂದು ನಮಗೆ ಅನುಮಾನ ಬರುತ್ತಾ ಇದೆ. ಸರಕಾರದವರು ಪೋಲೀಸಿನವರಿಗೆ ಫರ್ಮ್ ಆಗಿ ಡೀಲ್ ಮಾಡಬೇಕೆಂದು ಆದೇಶ ಕೊಟ್ಟಿದ್ದಾರೆಂದು ನಭೆಯ ಮುಂದೆ ಒಂದು ಕತೆ ಹೇಳುತ್ತಿದ್ದಾರೆ. ಆದರೆ ಹೊರಗಡೆ ನೋಡಿದರೆ ಯಾರೂ ತಡೆಗಟ್ಟದ ರೀತಿಯಲ್ಲಿ ಅವ್ಯಾಹತವಾಗಿ ದೌರ್ಜನ್ಯ ಕೃತ್ಯಗಳು ನಡೆಯುತ್ತಾ ಇವೆ. ಪಟ್ಟಣದಲ್ಲಿ ಆಶಾಂತಿ ತರೆದೋರುವ ಸನ್ನಿವೇಶ ಇದೆ ಎನ್ನುವುದನ್ನು ನಮ್ಮ ಗೃಹ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಸಹ ನಿನ್ನೆ ದಿವಸ ನೋಡಿದೆ, ಸುಬ್ರಮಣ್ಯನಗರದಲ್ಲಿ ಎಮ್ಮೆಯನ್ನು ಸುಟ್ಟು ಹಾಕಿದ್ದಾರೆ. ಇನ್ನೊಂದು ಎಮ್ಮೆ ಅಸ್ತವ್ಯಸ್ತವಾಗಿ ಸಾಯುವ ಸ್ಥಿತಿಯಲ್ಲಿ ಇದೆ. ಅದು ಒಂದು ಹೃದಯವಿದ್ರಾವಕ ಚಿತ್ರವಾಗಿದೆ, ಅದನ್ನು ಮರೆಯುವಹಾಗಿಲ್ಲ. ಆಷ್ಟೇ ಅಲ್ಲ ಈ ಘಟನೆಗಳು ಅಲ್ಲಿ ಮಾತ್ರ ನಡೆಯುತ್ತಾ ಇಲ್ಲ. ನನ್ನ ಹತ್ತಿರ 2–3 ಲಸ್ಟ್ ನನ್ನ ಕ್ಷೇತ್ರದ ಬಗ್ಗೆ ಬಂದಿದೆ. ಪ್ರಕಾಶ್ ನಗರದಲ್ಲಿ 3ನೇ ಫೆಬ್ರವರಿ 1970 ರಂದು ರಾತ್ರಿ ಒಂದೂವರೆ ಗಂಟೆಯ ಸಮಯದಲ್ಲಿ ಮನೆಮನೆಗೆ ನುಗ್ಗಿ ಅಲ್ಲಿರುವ ಕೂಲಿಗಳನ್ನು ಹೊಡೆದರು. ನವರಂಗ್ ಟಾಕೀಸಿನ ಹತ್ತಿರ 80 ಅಡಿ ರಸ್ತೆಯಲ್ಲಿ ದಾರಿಯಲ್ಲಿ ಹೋಗುವವರ ಮೇಲೆ ಸೋಡಾ ವಾಟರ್ ಬಾಟಲುಗಳಿಂದ ಹೊಡೆದರು. ಸಿದ್ಧರಾಮ ದಿಣ್ಣೆ ಸರ್ಕಲ್‌ನಲ್ಲಿ ನಾರಾಯಣ ಎನ್ನುವಾತನಿಗೆ ಗಾಯವಾಗಿದೆ. ಅಲ್ಲಯೇ ಇದ್ದ ಒಂದು ಬಟ್ಟೆ ಅಂಗಡಿಯನ್ನು ಸುಟ್ಟು ಹಾಕಿ, ಅಲ್ಲಿ ಇದ್ದುದ್ದನ್ನೆಲ್ಲಾ ತೆಗೆದುಕೊಂಡು ಹೋಗಿದ್ದಾರೆ. ಇಷ್ಟೆಲ್ಲಾ ಆದರೂ ರಾಜಾಜಿನಗರದ ಪೋಲೀಸಿನವರು ಎಂಟೂವರೆಗಂಟೆ ಸಮಯದಲ್ಲಿ 9 ಜನ ತಮಿಳರನ್ನು ಅರೆಸ್ಟ್ ಮಾಡಿ ಆಮೇಲೆ ರಾತ್ರಿ ಒಂದು ಗಂಟೆಯ ಸಮಯದಲ್ಲಿ ಅವರನ್ನು ಬಿಟ್ಟುಬಿಟ್ಟರು. ಶ್ರೀರಾಮಪುರದಲ್ಲಿ ಸೇವಾಶ್ರಮ ಶಾಲೆಯ ಎದುರುಗಡೆ ಇರುವ ಗುಡಿಸಲುಗಳಿಗೆ ಪುಂಡರು ಬೆಂಕಿ ಇಡಲು ಬಂದಾಗ ಅಲ್ಲಿದ್ದ ಜನರು ಅವರನ್ನು ಓಡಿಸಿದರು. ದಿನಾಂಕ 3ನೇ ಫೆಬ್ರವರಿ 1970 ರಂದು ಸಂಜೆ 5-30 ಗಂಟೆಗೆ ಗಾಯತ್ರಿನಗರದಲ್ಲಿ ರೈಲುದಾರಿಯ ಪಕ್ಕದಲ್ಲಿ, ಕಿರ್ಲೋಸ್ಕರ ಎಲೆಕ್ಟ್ರಿಕ್ ಕಂಪನಿಯ ಕೆಲವು ಕೆಲಸಗಾರರು ತಮ್ಮ ದಿನದ ಕೆಲಸದ ನಂತರ ನಡೆದುಕೊಂಡು ಮನೆಗೆ ವಾಪಸ್ಸು ಬರುತ್ತಿರುವಾಗ್ಗೆ, 50–60 ಜನ ಕನ್ನಡ ಚಳುವಳಿಗಾರರೆಂದು ಹೇಳಿಕೊಳ್ಳುವವರು ಆ ಕೆಲಸಗಾರರನ್ನು ನಿಲ್ಲಿಸಿ, ನಿಮ್ಮ ಭಾಷೆ ತಮಿಳೋ ಅಥವಾ ಕನ್ನಡವೊ ಎಂದು ಕೇಳಿದರು. ಯಾರು ತಮಿಳರು ಎಂದು ಹೇಳಿದರೋ ಅವರನ್ನು ನಿಲ್ಲಿಸಿ, ಬ್ಲೇಡ್‌ನಿಂದ ಕುಯಿದು, ಸೈಕಲ್ ಚೈನ್‌ನಿಂದ ಹೊಡೆದಿದ್ದಾರೆ.

ಮಲ್ಲೇಶ್ವರದಲ್ಲಿಯ ನಂದನಾರ್ ಗುಡಿಸಲುಗಳಿಗೆ ಮಲ್ಲೇಶ್ವರಂ ಪೋಲೀಸ್ ಸ್ಟೇಷನ್ನಿನ ಹತ್ತು ಜನ ಪೋಲೀಸರು ರಾತ್ರಿ ಹತ್ತು ಗಂಟೆ ಸುಮಾರಿಗೆ ಹೋಗಿ ಮಲಗಿಕೊಂಡಂಥ ಜನರನ್ನು ಎಬ್ಬಿಸಿ, ನಿಮ್ಮಲ್ಲಿ ಗೌಡರು ಯಾರು ಎಂದು ಕೇಳಿದರಲ್ಲದೆ ಕೆಲವರನ್ನು ಹೊಡೆದರು. ಇದಲ್ಲದೆ ರಾಜಾ ಮಿಲ್ ಕೆಲಸಗಾರರಾದ ಅರುಣಾಚಲಂ, ರಾಮಸ್ವಾಮಿ, ಧರ್ಮ, ಪಂಡಿಯನ್, ಥೋಪನ್ ಮುಂತಾದ ಐದು ಜನರನ್ನು ಮಲ್ಲೇಶ್ವರಂ ಪೋಲೀಸ್ ಸ್ಟೇಷನಿಗೆ ಕರೆದುಕೊಂಡು ಹೋಗಿ ಪೋಲೀಸರು ಹೊಡೆದಿದ್ದಾರೆ. ಮೂರ್ತಿ ಕುಮಾರ ಎಂಬ ವಿದ್ಯಾರ್ಥಿಯನ್ನು ಹೊಡೆದಿರುವುದಲ್ಲದೆ ಅವನ ಫೌಂಟನ್ ಪೆನ್ನನ್ನು ಕದ್ದಿದ್ದಾರೆ. ಆ ಪ್ರದೇಶದ ಹೆಂಗಸರನ್ನು ಅವಾಚ್ಯ ಶಬ್ದಗಳಿಂದ ಪೋಲೀಸರು ಬೈದಿದ್ದಾರೆ. ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿದ್ದ ಐದು ಜನರನ್ನು ರಾತ್ರಿ ಎರಡು ಗಂಟೆಗೆ ತಡವಾಗಿ ಬಿಟ್ಟು ಕೊಟ್ಟರು. ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಹನುಮಂತ ನಾಯಕರವರು ಈ ರೀತಿ ಕಾರಣವಿಲ್ಲದೆ ಜನಗಳನ್ನು ಹೊಡೆದಿದ್ದಾರೆ ಎಂದು ತಿಳಿದಿದೆ.

ಇನ್ನು ಬಿನ್ನಿಪೇಟೆಯಲ್ಲಿ ಭಾನುವಾರ 1ನೇ ಫೆಬ್ರವರಿ 1970 ರಂದು ಮುಂಜಾನೆ 10 ಗಂಟೆ ಸುಮಾರಿಗೆ ಮೂರು ನಾಲ್ಕು ತಮಿಳು ಕೆಲಸಗಾರರನ್ನು ಕನ್ನಡ ಚಳುವಳಿಗಾರರೆಂದುಕೊಳ್ಳುವವರು ಹೊಡೆದಿದ್ದಾರೆ. ಒಬ್ಬನಿಗೆ ತಲೆಗೆ ತೀವ್ರ ಗಾಯವಾದುದರಿಂದ ಆಸ್ಪತ್ರೆಗೆ ಸೇರಿಸಲಾಗಿದೆ. ಕೆಲವು ಮಲಯಾಳಿಗಳ ಅಂಗಡಿಗಳನ್ನು ಲೂಟಿ ಮಾಡಿದ್ದಾರೆ.

ಸೋಮವಾರ ದಿನಾಂಕ 2ನೇ ಫೆಬ್ರವರಿ 1970 ರಂದು ಸಾಯಂಕಾಲ ಕೆಂಪಾಪುರ ಅಗ್ರಹಾರದಲ್ಲಿ ಒಬ್ಬ ತಮಿಳು ಎಚ್.ಎ.ಎಲ್. ಕೆಲಸಗಾರನ ಮನೆಯಲ್ಲಿ ಹೊಕ್ಕು ಹೊಡೆದಿದ್ದಾರೆ.

(ಶ್ರೀ ಎಂ. ಎಸ್. ಕೃಷ್ಣನ್)

3ನೇ ಫೆಬ್ರುವರಿ 1970 ರಂದು ಬಚ್ಚೆ ಮಾರಾಟ ಮಾಡಲು ಹೊರಟಂಥ ಒಬ್ಬ ತಮಿಳನನ್ನು ಹಿಡಿದು ಅವನ ಹತ್ತಿರವಿದ್ದ ಬಚ್ಚೆ ಕಸಿದುಕೊಂಡಿದ್ದಾರೆ. ಮುಖ್ಯ ಮಂತ್ರಿಗಳ ಮಾತಿಗೆ ಬೆಲೆ ಕೊಡದೆ ಈ ರೀತಿ ಅತ್ಯಾಚಾರ ನಡೆಯುತ್ತಿದೆ. ದುಷ್ಟ ಶಕ್ತಿ ಈ ರೀತಿ ಬೆಳೆಯುತ್ತಿರುವುದರಿಂದ ಇದಕ್ಕೆ ಕೂಡಲೇ ಗಮನ ಕೊಡಬೇಕು. ಜನರಲ್ಲಿ ಭಾಷಾಂಧತೆ ಕೋಮುವಾರು ಹಿತಾಸಕ್ತಿ, ಬಂಡವಾಳ ಶಾಹಿಶಕ್ತಿ ಇಂಥ ದುಷ್ಟ ಶಕ್ತಿಗಳು ಬೆಳೆಯುತ್ತಿವೆ. ಇಂಥಾದ್ದಕ್ಕೆ ಅವಕಾಶ ಕೊಡ ಕೂಡದು ಮತ್ತು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು ಹಾಗು ಶಾಂತವಾದ ವಾತಾವರಣ ಉಂಟಾಗುವುದಕ್ಕೆ ಸಹಕರಿಸ ಬೇಕು ಎಂದು ಕೇಳಿಕೊಂಡು ಈ ಪ್ರಾಮುಖ್ಯವಾದ ವಿಷಯದ ಕಡೆಗೆ ತಮ್ಮ ಗಮನ ಸೆಳೆಯುತ್ತೇನೆ.

† ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಸಭಾಪತಿಗಳೇ, ಈ ವಿಷಯದಲ್ಲಿ ಎಷ್ಟು ಖಂಡನೆ ಮಾಡಿದರೂ ಅದು ಕಡಿಮೆಯಾಗುತ್ತದೆ ಎಂದು ಭಾವಿಸಿದ್ದೇನೆ. ಶಾಂತ ವಾತಾವರಣವನ್ನು ಕದಕಿ ಕೂಗಾಡುವುದು ನಡೆದಿದೆ. ಭಾಷೆಯ ಹೆಸರಿನಲ್ಲಿ ರಕ್ತದ ಹಸಿವು ಬಂದಿದೆ. ದುಷ್ಟ ಶಕ್ತಿಗಳು ಈ ರೀತಿ ಪ್ರಯತ್ನಪಟ್ಟು ಅರಾಜಕತೆ ಉಂಟು ಮಾಡಲು ಪ್ರಯತ್ನಿಸುತ್ತಿರುವುದನ್ನು ತೀವ್ರವಾಗಿ ಖಂಡನೇ ಮಾಡುತ್ತೇನೆ. ಮುಖ್ಯ ಮಂತ್ರಿಗಳು ಹೇಳಿರುವುದನ್ನು ಇವರಿಗೆ ತಿಳಿದುಕೊಳ್ಳಲು ಆಗಿಲ್ಲ. ಕನ್ನಡಿಗರು ತಮಿಳರು ಈ ರೀತಿ ಮಾಡಿದರೆ ಯಾರೂ ಉಳಿಯುವುದಿಲ್ಲ. ಸೋಮವಾರ ಮುಖ್ಯ ಮಂತ್ರಿಗಳು ಅಪೀಲ್ ಮಾಡಿಕೊಂಡಿದ್ದಾರೆ. ಇವರು ತಮಿಳರು ಇವರು ಕನ್ನಡಿಗರು ಎಂದು ಕಾರ್ಮಿಕರ ಮನೆ ನುಗ್ಗುವುದು ಸರಿಯಲ್ಲ. ನಿರಪರಾಧಿ ಕೆಲಸಗಾರರನ್ನು ಹೊಡೆದು ರಿಟ್ಯಾಲಿಯೇಷನ್ ಮಾಡ ಕೂಡದು. ಒಬ್ಬರಿಗೊಬ್ಬರು ಪ್ರೀತಿಯಿಂದ ಇರಬೇಕು. ಚಳುವಳಿಗಾರರ ಹೆಸರಿನಲ್ಲಿ ಬೊಂಬಾಯಿಯ ಶಿವ ಸೇನೆ ಪ್ರೋಟೋ ಟೈಪ್ ಚಳವಳಿ ಬೆಂಗಳೂರಿನಲ್ಲಿಯೂ ಹೆಚ್ಚುತ್ತಿದೆ. ಆದುದರಿಂದ ಇದನ್ನು ತಡೆಗಟ್ಟಲು ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಂಡು ನನ್ನ ಎರಡು ಮಾತು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಪತಿಗಳೇ, ನಿನ್ನೆಯ ದಿನ ಎಮ್ಮೆ ದನಗಳನ್ನು ಸುಟ್ಟಿರತಕ್ಕಂಥ ದೃಶ್ಯ ನಾನು ನೋಡಿದೆ, ನಿಜವಾಗಿಯೂ ಅದು ಕಣ್ಣಲ್ಲಿ ನೀರು ತರತಕ್ಕಂಥ ದೃಶ್ಯ. ತಮಿಳರ ಗುಡಿಸಲಿಗೆ ತೆಲಗು ಜನರ ಗುಡಿಸಲಿಗೆ ಬೆಂಕಿ ಇಟ್ಟಿದ್ದಾರೆ. ನಮ್ಮ ಮನೆಯ ಹತ್ತಿರ ತಮಿಳು ಹರಿಜನರ ಅನೇಕ ಗುಡಿಸಲುಗಳು ಇವೆ. ತಮ್ಮ ಗುಡಿಸಲುಗಳಿಗೆ ಬೆಂಕಿ ಹಚ್ಚುತ್ತಾರೆ ಏನು ಮಾಡಬೇಕು ಎಂದು ಕೇಳಿ ಅವರೆಲ್ಲರೂ ನಮ್ಮ ಮನೆಗೆ ಬಂದು ಕೂತುಕೊಂಡರು. ನಮ್ಮ ಮನೆಗೆ ಬನ್ನಿ ಎಂದು ನಾನು ಅವರಿಗೆ ಹೇಳಿದೆ. ನನ್ನ ಮನೆಯವರು ಮದ್ರಾಸಿನಿಂದ ಬಂದ ತಮಿಳು ಭಾಷೆಯವಳಾಗಿದ್ದಾಳೆ. ಬೆಂಗಳೂರಿನಲ್ಲಿ ತಮಿಳರನ್ನು ಓಡಿಸುತ್ತಿದ್ದಾರೆ ಅದರಂತೆ ನನ್ನನ್ನೂ ಓಡಿಸುತ್ತೀರಾ ಎಂದು ನನಗೆ ಕೇಳಿದಳು. ಹಾಗಾದರೆ ನಾನು ಮದ್ರಾಸಿಗೆ ಬಂದರೆ ನನ್ನನ್ನು ಅಲ್ಲಿಂದ ಓಡಿಸುತ್ತಾರೆಯೇ ಎಂದು ನಾನು ಅವಳಿಗೆ ಕೇಳಿದೆ. ನನ್ನ ಅಳಿಯ ಮದ್ರಾಸಿನಲ್ಲಿ ಇದ್ದಾನೆ, ಅವನನ್ನು ಅಲ್ಲಿಂದ ತಮಿಳರು ಓಡಿಸುತ್ತಾರೆಯೇ ಎಂದು ಕೇಳಿದೆ. ಮದ್ರಾಸಿನಲ್ಲಿ ಕೂಡ ತೆಲಗು ಭಾಷೆಯವರು ಹೆಚ್ಚಾಗಿ ಇದ್ದಾರೆ. ಅಲ್ಲಿಂದ ಅವರನ್ನು ಓಡಿಸುತ್ತಾರೆಯೇ? ಬೆಂಗಳೂರಿನಲ್ಲಿ ಈ ರೀತಿ ಮಾಡುವುದು ಬೇಡ. ಇಂಥ ಚಳುವಳಿ ಬಗ್ಗೆ ಪತ್ರಿಕೆಗಳಲ್ಲಿ ವರದಿ ಪ್ರಕಟಿಸಿ ಪ್ರಚಾರ ಮಾಡುವುದು ಸರಿಯಲ್ಲ. ಹೋಟೆಲ್ ಸಿಬ್ಬಂದಿಯವರು ತೊಂದರೆ ತಪ್ಪಿಸಿಕೊಳ್ಳಲು ಚಳುವಳಿಗಾರರಿಗೆ ದುಡ್ಡು ಕೊಡುತ್ತಾರೆ. ಈ ರೀತಿ ಅವರಿಗೆ ದುಡ್ಡು ಕೊಡುವುದು ಸಹ ನಿಲ್ಲಬೇಕು. ಇವರು ಕಲ್ಲು ಹೊಡೆಯುವುದೂ ಸಹ ನಿಲ್ಲಬೇಕು. ಪೋಲೀಸಿನವರು ನಿರ್ವಾಕ್ಷಿಣ್ಯವಾಗಿ ಈ ಬಗ್ಗೆ ಕ್ರಮ ಕೈಕೊಳ್ಳಬೇಕು. ಸರಕಾರ ಕೂಡ ಉಗ್ರ ಕ್ರಮ ತೆಗೆದುಕೊಳ್ಳಬೇಕು ಅಂದರೆ ಜನರಿಗೆ ಉಪಕಾರವಾಗುತ್ತದೆ. ಯಾಕೆಂದರೆ ಇದರಲ್ಲಿ ಬಡ ಜನರಿಗೆ ಬಹಳ ತೊಂದರೆಯಾಗಿದೆ. ಬೆಂಗಳೂರಿನಲ್ಲಿ ಮೂಟೆ ಹೊರತಕ್ಕಂಥ ಕೆಲಸಗಾರರೆಲ್ಲರೂ ತಮಿಳರು ಆಗಿದ್ದಾರೆ. ಅವರಿಗೆ ಸೂಕ್ತ ರಕ್ಷಣೆ ದೊರೆಯಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ನನ್ನದು ಇನ್ನೊಂದು ನೋಟೀಸ್ ಇದೆ. ಈಗಾಗಲೇ ಎರಡೂವರೆ ಗಂಟೆಯಾಗುತ್ತಾ ಬಂದಿದೆ. ನನಗೂ ಮಾತನಾಡಲು ಅವಕಾಶ ಕೊಡಬೇಕು ಎಂದು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ನಮ್ಮ ಜನ ಎಲ್ಲರನ್ನೂ ಸಹೋದರ ಭಾವದಿಂದ ನೋಡಬೇಕು. ಕನ್ನಡ ಬಳವಣಿಗೆಗೆ ಈ ರೀತಿ ಚಳುವಳಿ ಮಾಡುವುದರಿಂದ ದೇಶದಲ್ಲಿ ಡಿ. ಎಂ. ಕೆ. ಬರುತ್ತದೆ.

ಕನ್ನಡ ಚಳುವಳಿಯಿಂದ ಡಿ. ಎಂ. ಕೆ. ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಮತ್ತು ನಮಗೆ ತೊಂದರೆಯಾಗತಕ್ಕಂಥ ಸಂದರ್ಭ ಬರುತ್ತದೆ. ನಿಜವಾಗಿಯೂ ಇದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಕೆಡಕು ಆಗುತ್ತದೆ. ಈ ರೀತಿ ಆಗುವುದಕ್ಕೆ ಸರ್ಕಾರದವರು ಅವಕಾಶವನ್ನು ಕೊಡಬಾರದು. ಸರ್ಕಾರದವರು ಎಲ್ಲರ ಹಿತರಕ್ಷಣೆಯನ್ನು ಮಾಡಬೇಕು. ಬೆಂಗಳೂರಿನ ಜನಗಳು ಹಾಗೂ ಅಲ್ಪಸಂಖ್ಯಾತರಾದವರೂ ಕೂಡ ಕ್ಷೇಮವಾಗಿರುವ ಹಾಗೆ ಮಾಡಬೇಕು. ತಮಿಳರು ಮತ್ತು ಕನ್ನಡಿಗರಲ್ಲಿ ಸೌಹಾರ್ದಯುತವಾದ ವಾತಾವರಣವನ್ನು ಕಲ್ಪಿಸುವಂತೆ ಮಾಡಬೇಕು ಇದರಲ್ಲಿ ಮುಂದೆ ಏನಾದರೂ ಅನಾಹುತವಾದರೆ ಅದಕ್ಕೆ ಸರ್ಕಾರದವರನ್ನೇ ನಾವು ಜವಾಬ್ದಾರರನ್ನಾಗಿ ಮಾಡುತ್ತೇವೆ ಬೇರೆ ಯಾರನ್ನೂ ನಾವು ಜವಾಬ್ದಾರರನ್ನಾಗಿ ಮಾಡುವುದಿಲ್ಲ, ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

2-30 P.M.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನಾನು ತಮಗೆ ಕೊಟ್ಟಿರುವ ನೋಟೀಸಿನಲ್ಲಿ ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ನಿನ್ನೆ ದಿವಸ ಒಂದು ದುರ್ಘಟನೆ ನಡೆಯಿದೆ. ಬೆಂಗಳೂರು ನಗರದಲ್ಲಿ 56 ದಿವಸಗಳಿಂದ ಮೈನೂರು ಎಲೆಕ್ಟ್ರಿಕ್ ಇಂಡಸ್ಟ್ರೀಸ್ ಕಾರ್ಮಿಕರು ಮುಷ್ಕರ ಹೂಡಿದ್ದಾರೆ. ಅವರು ಫ್ಯಾಕ್ಟರಿ ಮುಂದೆ ಹಂಗರ್ ಸ್ಟ್ರೈಕ್ ಮಾಡುತ್ತಿದ್ದರು. ನೆನ್ನೆಯ ದಿವಸ ರಾತ್ರಿ 11½ ಗಂಟೆಯ ಸಮಯದಲ್ಲಿ ಪೋಲೀಸಿನವರು ಆ ಎಲೆಕ್ಟ್ರಿಕ್ ಇಂಡಸ್ಟ್ರೀಸ್ ನವರು ಮುಷ್ಕರ ಹೂಡುವುದಕ್ಕೆ ಹಾಕಿಕೊಂಡಿದ್ದಂತಹ ಟೆಂಟಿನ ಹತ್ತಿರ ಹೋಗಿ ಆ ಟೆಂಟನ್ನು ಕಿತ್ತು ಹಾಕಿ ಅಲ್ಲಿ ಮುಷ್ಕರ ಹೂಡಿದ್ದವರನ್ನು ಎಲ್ಲರನ್ನೂ ಪೋಲೀಸಿನವರು ಕರೆದುಕೊಂಡು ಹೋಗಿದ್ದಾರೆ. ಅವರನ್ನು ಎಲ್ಲಿಗೆ ಕರೆದುಕೊಂಡು ಹೋಗಿದ್ದಾರೆ ಎಂಬುದು ಗೊತ್ತಿಲ್ಲ. ಪೋಲೀಸಿನವರನ್ನು ಕೇಳಿದರೆ ಯಾರೂ ಆ ವಿಚಾರವನ್ನು ಹೇಳುವುದಿಲ್ಲ ಬೆಂಕಿ ಹತ್ತಿಕೊಂಡು ಉರಿಯುತ್ತಿದ್ದುದನ್ನು ಶ್ರೀಮಾನ್ ವಿ. ಎನ್. ಪಾಟೀಲರು ನೋಡಿದ್ದೇನೆಂದು ಅವರು ನನಗೆ ತಿಳಿಸಿದರು. ನಾನು ಸಹ ರಾತ್ರಿ 12ಕ್ಕೆ ಆ ಜಾಗಕ್ಕೆ ಹೋಗಿ ಬಂದೆ. ಟೆಂಟ್ ಮಾಯವಾಗಿತ್ತು, ಕೆಲವು ವಸ್ತುಗಳು ಸುಟ್ಟು ಬೂದಿಯಾಗಿದ್ದವು. ಕಾರ್ಮಿಕರು ಒಂದುವೇಳೆ ತಪ್ಪು ಮಾಡಿದ್ದರೆ ಅವರನ್ನು ದಂಡಿಸಬಹುದಿತ್ತು. ಬದಲು ಪೋಲೀಸರ ಅವ್ಯಾಹತ ದಬ್ಬಾಳಿಕೆ, ದೌರ್ಜನ್ಯ ನಡೆದಿದೆ. ಅವರು ಆ ಕಾರ್ಮಿಕರನ್ನು ಸರಿಯಾದ ರೀತಿಯಲ್ಲಿ ನೋಡಿಕೊಂಡಿಲ್ಲ. ಆ ಎಲೆಕ್ಟ್ರಿಕ್ ಫ್ಯಾಕ್ಟರಿ ನೌಕರರು ಸುಮಾರು 56 ದಿವಸಗಳಿಂದ ಮುಷ್ಕರ ನಡೆಸುತ್ತಿದ್ದಾರೆ. ಅವರಬಗ್ಗೆ ಕಾರ್ಮಿಕ ಮಂತ್ರಿಗಳ ಹತ್ತಿರ ಮತ್ತು ಮುಖ್ಯ ಮಂತ್ರಿಗಳ ಹತ್ತಿರ ಅನೇಕ ಸಲ ಮಾತನಾಡಿದ್ದರೂ ಕೂಡ ಆ ಪ್ರಶ್ನೆ ಬಗೆಹರಿದಿಲ್ಲ. ಅದನ್ನು ಅದಷ್ಟು ಬೇಗ ಇತ್ಯರ್ಥ ಮಾಡಬೇಕು. ಅದರಲ್ಲಿ ರಾಜಕೀಯವನ್ನು ತರುವುದು ಸರಿಯಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಕಾರ್ಮಿಕ ಮಂತ್ರಿಗಳು ಅದಷ್ಟು ಜಾಗ್ರತೆ ಆ ಎಲೆಕ್ಟ್ರಿಕ್ ಫ್ಯಾಕ್ಟರಿಯ ಕಾರ್ಮಿಕರ ವಿಷಯವನ್ನು ಇತ್ಯರ್ಥ ಮಾಡಬೇಕು ಇಲ್ಲದೆ ಹೋದರೆ ಪರಿಸ್ಥಿತಿ ಇನ್ನೂ ಉಲ್ಬಣವಾಗುತ್ತದೆ. ಇವೊತ್ತು ಬೆಂಗಳೂರಿನಲ್ಲಿರುವ ಕಾರ್ಮಿಕರಿಗೆ ತುಂಬಾ ಅನ್ಯಾಯವಾಗುತ್ತಿದೆ. ಆದ್ದರಿಂದ ಅವರ ಬಗ್ಗೆ ಸರ್ಕಾರದವರು ಮಧ್ಯೆ ಪ್ರವೇಶ ಮಾಡಿ ಅವರಿಗೆ ಕರುಣೆಯನ್ನು ತೋರಿಸಬೇಕು. ನಿನ್ನೆ ಮುಷ್ಕರದಲ್ಲಿದ್ದವರನ್ನು ಪೋಲೀಸಿನವರು ಮಲ್ಲೇಶ್ವರಂ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಅವರನ್ನು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಸರ್ಕಲ್ ಇನ್‌ಸ್ಪೆಕ್ಟರ್ ನಾಯಕರವರೇ ಇದಕ್ಕೆ ಕಾರಣರು. ಸರ್ಕಾರದವರು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಪಡಿಸುತ್ತೇನೆ.

Sri K. PUTTASWAMY.—Sir, I have no objection. If you are permitting the Hon'ble Member to level charges against the Government, my request is that the Chair will have to allow sufficient time for Government to rebut arguments; and the Chair has to take note of the quorum in the House.

Sri M. S. KRISHNAN.—I appreciate the view of the Hon'ble Minister, Sir. When I have a right to speak, the Hon'ble Minister also should have an opportunity to reply.

I will just finish by saying that the incident that has taken place, namely, the burning of the tent occupied by the hunger-strikers by the

(SRI M. S. KRISHNAN)

police is the most atrocious thing and we condemn it and request the Government to take note of the problem of the workers and try to solve it in a satisfactory manner. That is all.

Sri V. N. PATIL.—We are anxious to know whether those persons who are taken away by the Police are safe and whether they are alive.

Sri K. PUTTASWAMY.—I want to draw the kind attention of the Chair : there is no quorum in the House.

(*The quorum bell was rung and there was no quorum*)

Mr. DEPUTY SPEAKER.—Since there is no quorum, I adjourn the House *sine die.*

The House adjourned sine die *at Forty Minutes past Two of the Clock.*